**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>**

<u>ಸಿ.ಸಿ. ನಂ.***40/2026***</u>

***<u>ಫಿರ್ಯಾದುದಾರರುಃ</u>***: ಸರ್ಕಾರದ ಪರವಾಗಿ ಹರಿಹರಪುರ ಪೊಲೀಸರು

**ವಿರುದ್ಧ**

***<u>ಆರೋಪಿತರುಃ</u>*** 1. ಮಹಮ್ಮದ್ ಇರ್ಫಾನ್ ಬಿನ್ ಇಸ್ಮಾಯಿಲ್, 23 ವರ್ಷ, ಮೀನು ಲಾರಿಯಲ್ಲಿ ಕೆಲಸ, ವಾಸ ಭಾರತ್ ರೈಸ್ ಮಿಲ್ ಹತ್ತಿರ, ಕೊಪ್ಪ.

**<u>ದೋಷಾರೋಪಣೆ</u>**

ಶ್ರೀಮತಿ ನಂದಿನಿ ಎಂ.ಎನ್., ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

*2021* ನೇ ಸಾಲಿನಲ್ಲಿ ಆರೋಪಿ ಮಹಮ್ಮದ್ ಇರ್ಫಾನ್ ಆದ ನೀವು ಈ ಹಿಂದೆ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ ಸಿ.ಸಿ. ಸಂಖ್ಯೆ *646/2024* ರಲ್ಲಿ ಆರೋಪಿ ಮಹಮ್ಮದ್ ರೌಫ್ ಎ. ರವರ ಸ್ನೇಹಿತನಾಗಿದುದ, ದಿನಾಂಕ ಆತನ ಮೊಬೈಲ್ ನಂಬರ *7349333205* ನಿಂದ ಚಾಸಾ.*2* ಜೆ. ಮಾನಸ ರವರ ಮೊಬೈಲ್ ನಂಬರ್ *7624848025* ಕ್ಕೆ ಕರೆ ಮಾಡಿ ನಿನ್ನಿಂದ ಮಹಮ್ಮದ್ ರೌಫ್ ಏನಾದರೂ ಮಾಡಿಕೊಂಡರೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲವೆಂದು ಚಾಸಾ.*2,* ಜೆ. ಮಾನಸರವರಿಗೆ ಜೀವ ಬೆದರಿಕೆ ಹಾಕಿ, ಭಾ.ದಂ.ಸಂ. ಕಲಂ ***506*** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಃ1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ಆ-1 ತಿಳಿಯಿತು.

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ ವಿಚಾರಣೆಯಾಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ 18.03.2026

ಸಹಿ/- 18.03.2026.

(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
*ಪ್ರದನ್ಯಾದಂಃ ಕೊಪ್ಪ.*